**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,**

**ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 79/2024 |
| ಸಿ.ಡಬ್ಲೂ | - 01 |
| ಪಿ.ಡಬ್ಲೂ | - 01 |
| ಸಾಕ್ಷಿಯ ಹೆಸರು | - ಸುನೀಲ ಬಸಪ್ಪ ಕುಂಬಾರ |
| ವಯಸ್ಸು | - 31 ವರ್ಷ |
| ಉದ್ಯೋಗ | - ಒಕ್ಕಲುತನ |
| ವಾಸ ಸ್ಥಳ | - ತುಪ್ಪದಕುರಹಟ್ಟಿ |

ದಿನಾಂಕಃ 22/02/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯ ಇದೆ. ಚಾಸಾ-4 ಮತ್ತು 5, 6, 9 ರಿಂದ 13 ರವರ ಪರಿಚಯವಿಲ್ಲ. ಮೃತ ಬಸಪ್ಪ ನನ್ನ ತಂದೆ.

ಈಗ ಅಂದಾಜು 1 ವರ್ಷದ ಹಿಂದೆ ಆರೋಪಿ ನನ್ನ ತಂದೆಯನ್ನು ಮೋಟಾರ ಸೈಕಲ್ ಮೇಲೆ ಕರೆದುಕೊಂಡು ಹೋಗಿ ಅಣ್ಣಿಗೇರಿಯ ಟೋಲ್ ನಾಕಾದ ಹತ್ತಿರ ಸ.05.30 ಗಂಟೆಗೆ ಅಪಘಾತಪಡಿಸಿರುತ್ತಾರೆ. ಚಾಲಕ ಅತೀ ವೇಗದಿಂದ ಚಲಾಯಿಸಿ ನರಗುಂದದಿಂದ ಬಂದು ನಮಗೆ ಅಪಘಾತ ಪಡಿಸಿರುತ್ತಾರೆ. ಸದರಿ ಅಪಘಾತ ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಂತರ ಸದರಿ ವಿಷಯ ನನಗೆ ಗೊತ್ತಾಗಿದ್ದು, ಆಗ ನಾನು ಅಪಘಾತ ಸ್ಥಳಕ್ಕೆ ಹೋಗಿದ್ದು, ನನ್ನ ತಂದೆ ಸದರಿ ಅಪಘಾತದಿಂದ ಗಾಯಗೊಂಡು ಮೃತಪಟ್ಟಿರುತ್ತಾರೆ. ನಂತರ ನಾನು ಪೋಲಿಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ದೂರನ್ನು **ನಿಪಿ-1** ಎಂದು ಹಾಗೂ ಸಾಕ್ಷಿಯ ಸಹಿಯನ್ನು

**ನಿಪಿ-1 ಎ** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ -**

ದಿನಾಂಕಃ 03-09-2023 ರಂದು ಆರೋಪಿ ನನ್ನ ತಂದೆಯನ್ನು ಕೂರಿಸಿಕೊಂಡು ಹೋದಾಗ ನಲವಡಿ ಟೋಲ್ ಹತ್ತಿರ ಆರೋಪಿ ತನ್ನ ಮೋಟಾರ ಸೈಕಲ ಸಂಃ KA-26-L-0274 ನೇದ್ದನ್ನು ಚಾಲನಾ ಪರವಾನಗೆ ಇಲ್ಲದೇ ಅತೀ ವೇಗ ಹಾಗೂ ಅಲಕ್ಷ್ಯತನದಿಂದ ಚಲಾಯಿಸಿ ಅದೇ ಮಾರ್ಗದಲ್ಲಿ ಮುಂದೆ ಹೋಗುತ್ತಿದ್ದ ಲಾರಿ ಸಂಃ KA-52-A-1299 ನೇದ್ದಕ್ಕೆ ಅಪಘಾತ ಪಡಿಸಿದ್ದರಿಂದ ನನ್ನ ತಂದೆ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಂತರ ದಿನಾಂಕಃ  04-09-2023 ರಂದು ನಾನು ತೋರಿಸಿದ ಮೇರೆಗೆ ಪೋಲೀಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು **ನಿಪಿ-2** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-2 ಎ** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಭಾವಚಿತ್ರವನ್ನು **ನಿಪಿ-3** ಎಂದುಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದಃ**

ದೂರನ್ನು ಸಲ್ಲಿಸಲು ಹೋದಾಗ ಸಮಯ ಸ.04.00 ಗಂಟೆಯಾಗಿತ್ತು. ನಿಪಿ-1 ನ್ನು ಪೋಲೀಸರು ಬೆರಳಚ್ಚು ಮಾಡಿದ್ದರು ನಾನು ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನನ್ನ ತಂದೆ ಮೃತ ಪಟ್ಟ ಕಾರಣ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆ ಮದ್ಯ ಸೇವಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಆಯ ತಪ್ಪಿ ಬಿದ್ದಿದ್ದರಿಂದ ಆತನ ತಪ್ಪಿನಿಂದ ಅಪಘಾತವಾಗಿರುತ್ತದೆ ಹಾಗೂ ಆರೋಪಿ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಣ್ಣಿಗೇರಿಯಲ್ಲಿ ಟೋಲ್ ನಾಕಾ ಇಲ್ಲ ಎಂದರೆ ಸರಿ. ಅಪಘಾತವಾದ 1 ವಾರದ ನಂತರ ನಾನು ಪಂಚನಾಮೆಗೆ ಹೋಗಿರುತ್ತೇನೆ. ಸದರಿ ಪಂಚನಾಮೆಗೆ ಸಹಿಯನ್ನು ಪೋಲೀಸ ಠಾಣೆಯಲ್ಲಿ

ಮಾಡಿರುತ್ತೇನೆ. ಸದರಿ ಸಹಿಯನ್ನು ಪೋಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**